# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 5 (159) |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.08.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು . |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ರಾಜ್ಯದಲ್ಲಿ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2024-25ನೇ ಸಾಲಿಗೆ ರಾಜ್ಯದಲ್ಲಿ ಒಟ್ಟು 993 ಅನಧಿಕೃತ ಶಾಲೆಗಳನ್ನು ಗುರುತಿಸಲಾಗಿದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿರಿಸಿದೆ) |
| ಆ) | ಈ ಅನಧಿಕೃತ ಶಾಲೆಗಳ ವಿರುದ್ಧ ಸರ್ಕಾರದಿಂದ ಈವರೆಗೆ ಕೈಗೊಂಡಿರುವ ಕ್ರಮಗಳಾವುವು; ಎಷ್ಟು ಶಾಲೆಗಳ ಮೇಲೆ ದಂಡ ವಿಧಿಸಲಾಗಿದೆ; ಅಥವಾ ಎಷ್ಟು ಶಾಲೆಗಳನ್ನು ಮುಚ್ಚಲಾಗಿದೆ; | ಖಾಸಗಿ ಶಾಲೆಗಳ ನೊಂದಣಿ ಪ್ರಾಧಿಕಾರಿಗಳಾದ ಸಂಬಂಧಪಟ್ಟ ಉಪನಿರ್ದೇಶಕರುಗಳಿಗೆ ಸದರಿ ಶಾಲೆಗಳ ವಿರುದ್ಧ ಸೂಕ್ತ ಕ್ರಮವಹಿಸುವಂತೆ ಸೂಚನೆಯನ್ನು ನೀಡಲಾಗಿರುತ್ತದೆ. |
| ಇ) | ಅನಧಿಕೃತ ಶಾಲೆಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯುಂಟು ಮಾಡುತ್ತಿರುವ ಹಿನ್ನಲೆಯಲ್ಲಿ ಈ ಮಾದರಿ ಶಾಲೆಗಳನ್ನು ನಿಯಂತ್ರಣಕ್ಕೆ ತರಲು ಸರ್ಕಾರ ಕೈಗೊಂಡ ಯೋಜನೆಗಳಾವುವು; | ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ದಿನಾಂಕ: 09.01.2024ರ ಸುತ್ತೋಲೆಯ ಅನುಸಾರ ಅನಧಿಕೃತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಅಧಿಕೃತ ಶಾಲೆಗೆ ದಾಖಲು ಮಾಡಲು ಹಾಗೂ ಅನಧಿಕೃತ ಶಾಲೆಗಳನ್ನು ತಕ್ಷಣ ಮುಚ್ಚುವಂತೆ ಆಡಳಿತ ಮಂಡಳಿಗೆ ಸೂಚಿಸಲು ಸಂಬಂಧಪಟ್ಟ ಸಿ.ಆರ್.ಪಿ, ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕರು ಸ್ಥಳ ಪರಿಶೀಲನೆ ನಡೆಸಿ ಶಾಲೆಯು ಮುಚ್ಚಿರುವುದನ್ನು ಖಾತರಿಪಡಿಸಿಕೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ಸಲ್ಲಿಸತಕ್ಕದ್ದು. ಅನಧಿಕೃತ ಶಾಲೆಗಳು ಮುಚ್ಚದೇ ನಡೆಸುತ್ತಿರುವುದು ಕಂಡುಬಂದಲ್ಲಿ ಅಂತಹ ಶಾಲೆಗಳನ್ನು ಮುಚ್ಚಲು ಹಾಗೂ ಸದರಿ ಶಾಲೆಯ ಆಡಳಿತ ಮಂಡಳಿಯ ವಿರುದ್ಧ ನಿಯಮಾನುಸಾರ ಸಂಬಂಧಪಟ್ಟ ವ್ಯಾಪ್ತಿಯ ಆರಕ್ಷಕ ಠಾಣೆಯಲ್ಲಿ ದೂರು ದಾಖಲಿಸಿ ಹಾಗೂ ಸದರಿ ಶಾಲೆಯನ್ನು ಅಗತ್ಯಾನುಸಾರ ಪೋಲೀಸ್ ಇಲಾಖೆಯ ಸಹಾಯದೊಂದಿಗೆ ಮುಚ್ಚುವ ಕೆಲಸವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು ಹಾಗೂ ಅಂತಹ ಅನಧಿಕೃತ ಶಾಲೆಗೆ ಡೈಸ್ ಕೋಡ್ ನೀಡಿದ್ದಲ್ಲಿ ಅದನ್ನು ತಕ್ಷಣ ಹಿಂಪಡೆಯಲು ಕ್ರಮವಹಿಸುವಂತೆ ರಾಜ್ಯದ ಎಲ್ಲಾ ಉಪನಿರ್ದೇಶಕರಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಗಿದೆ. |
| ಈ) | ಅನಧಿಕೃತ ಶಾಲೆಗಳ ಮೇಲ್ವಿಚಾರಣೆಗೆ ಮತ್ತು ನಿಯಂತ್ರಣಕ್ಕೆ ಸರ್ಕಾರ ವಿಶೇಷ ಸಮಿತಿಗಳನ್ನು ರಚಿಸಿದೆಯೇ; ಇದ್ದಲ್ಲಿ, ಅದರ ಕಾರ್ಯವೈಖರಿ ಕುರಿತು ಮಾಹಿತಿ ನೀಡುವುದು; | |
| ಉ) | ಇಂತಹ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲೆಗಳು, ಪ್ರಮಾಣ ಪತ್ರಗಳು ಮಾನ್ಯತೆ ಹೊಂದಿರುತ್ತದೆಯೇ; ವಿದ್ಯಾರ್ಥಿಗಳಿಗೆ ಆದ ಸಂಭವನೀಯ ತೊಂದರೆಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? | |

| | | |
|---|---|---|
| | | ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಸುತ್ತೋಲೆ ದಿನಾಂಕ: 08.04.2024 ರಂತೆ ಕರಡು ಅಧಿಕೃತ ಶಾಲೆಗಳ ಪಟ್ಟಿಯನ್ನು ಕಾಲಮಿತಿಯಲ್ಲಿ ಪ್ರಕಟಿಸಲು ನಂತರ ಕರಡು ಪಟ್ಟಿಗೆ ಸಂಬಂಧಿಸಿದಂತೆ ಶಾಲಾ ಆಡಳಿತ ಮಂಡಳಿಗಳಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿ, ಸ್ವೀಕೃತ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಅಂತಿಮ ಅಧಿಕೃತ ಶಾಲೆಗಳ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸುವಂತೆ ತಿಳಿಸಲಾಗಿದೆ.<br><br>ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿನ ಅಧಿಕೃತ ಶಾಲೆಗಳ ಕರಡು ಪಟ್ಟಿಯನ್ನು ಕಡ್ಡಾಯವಾಗಿ ಶಾಲಾ ಆಡಳಿತ ಮಂಡಳಿಯವರು ಸಲ್ಲಿಸಿದ ಆಕ್ಷೇಪಣೆಗಳಂತೆ ಪರಿಶೀಲಿಸಿ ಖಚಿತಪಡಿಸಿಕೊಂಡು, ಅಧಿಕೃತ ಶಾಲೆಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲು ಸೂಚಿಸಲಾಗಿದೆ. ಈ ಪ್ರಕಟಣೆಯನ್ನು ಕಛೇರಿಯ ಆವರಣದಲ್ಲಿ ಸಾರ್ವಜನಿಕರಿಗೆ ಗೋಚರವಾಗುವಂತೆ ಶಾಲೆಯ ಹೆಸರು, ಮಾಧ್ಯಮ ಮತ್ತು ಪಠ್ಯಕ್ರಮ ಹಾಗೂ ವಿಳಾಸದ ವಿವರಗಳ ಸಹಿತ ಪ್ರಕಟಿಸಲು ಸುತ್ತೋಲೆ ಮೂಲಕ ಸೂಚಿಸಲಾಗಿದೆ.<br><br>ದಿನಾಂಕ: 20.06.2024ರ ಆಯುಕ್ತರ ಕಛೇರಿಯ ಜ್ಞಾಪನದಂತೆ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಅಧಿಕೃತ ಪಟ್ಟಿಯಲ್ಲಿ ಪ್ರಕಟಿಸಿರುವ ಶಾಲೆಗಳನ್ನು ಹೊರತುಪಡಿಸಿ. "ಅನಧಿಕೃತ" ಎಂದು ಗುರುತಿಸಲಾಗಿರುವ ಶಾಲೆಗಳಲ್ಲಿ 2024-25ನೇ ಸಾಲಿನಲ್ಲಿ ವ್ಯಾಸಂಗ ಮಾಡುವ ಮಕ್ಕಳ ಶೈಕ್ಷಣಿಕ ಭವಿಷ್ಯ ಕುಂಠಿತವಾಗದಂತೆ, ಅಂತಹ ಶಾಲೆಗಳ ವಿರುದ್ಧ ನಿಯಮಾನುಸಾರ ಕೈಗೊಂಡ ಕ್ರಮದ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಲು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸೂಚಿಸಲಾಗಿದೆ.<br><br>ಪ್ರಸ್ತುತ ಉಪನಿರ್ದೇಶಕರಿಂದ ಸ್ವೀಕೃತವಾಗುತ್ತಿರುವ ಮಾಹಿತಿ/ವರದಿ ಆಧರಿಸಿ ಅನಧಿಕೃತ ಶಾಲೆಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸುವಂತೆ ಸಕ್ಷಮ ಪ್ರಾಧಿಕಾರಗಳಿಗೆ ತಿಳಿಸಲಾಗಿದೆ. |

ಸಂಖ್ಯೆ: ಇಪಿ 272 ಪಿಜಿಸಿ 2025

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

## ಅನಧಿಕೃತ ಶಾಲೆಗಳ ಅಂಕಿ-ಅಂಶಗಳ ಮಾಹಿತಿ ಜಿಲ್ಲಾವಾರು

| ಕ್ರ. ಸಂ. | ಜಿಲ್ಲೆಯ ಹೆಸರು | ಶಾಲಾ ನೋಂದಣಿ /ಅನುಮತಿ ಪಡೆಯದೇ ನಡೆಯುತ್ತಿರುವ ಶಾಲೆಗಳ ಸಂಖ್ಯೆ | ನೋಂದಣಿ ಇಲ್ಲದೆ ಅನಧಿಕೃತವಾಗಿ ಉನ್ನತೀಕರಿಸಿದ ತರಗತಿಗಳನ್ನು ನಡೆಸುತ್ತಿರುವ ಶಾಲೆಗಳ ಸಂಖ್ಯೆ | ರಾಜ್ಯ ಪಠ್ಯಕ್ರಮದಲ್ಲಿ ಅನುಮತಿ ಪಡೆದು ಇತರೆ ಪಠ್ಯಕ್ರಮದಲ್ಲಿ ಬೋಧಿಸುತ್ತಿರುವ ಶಾಲೆಗಳ ಸಂಖ್ಯೆ | ಅನಧಿಕೃತ ಮಾಧ್ಯಮ/ | ಅನಧಿಕೃತ ಹೆಚ್ಚುವರಿ ವಿಭಾಗಗಳನ್ನು ಹೊಂದಿರುವ ಶಾಲೆಗಳ ಸಂಖ್ಯೆ | ಅನುಮತಿ ಇಲ್ಲದೇ ಸ್ಥಳಾಂತರಿಸಿರುವ ಶಾಲೆಗಳ ಸಂಖ್ಯೆ | ಅನುಮತಿ ಇಲ್ಲದೇ ಹಸ್ತಾಂತರಿಸಿರುವ ಶಾಲೆಗಳ ಸಂಖ್ಯೆ | ಕೇಂದ್ರಪಠ್ಯಕ್ರಮಕ್ಕೆ ಸಂಯೋಜನೆ ಹೊಂದಿದ ನಂತರ ಅನಧಿಕೃತವಾಗಿ ಅದೇ ಕಟ್ಟಡದಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ಮುಂದುವರೆಸುತ್ತಿರುವ ಶಾಲೆಗಳ ಸಂಖ್ಯೆ | ರಾಜ್ಯ ಪಠ್ಯಕ್ರಮದಲ್ಲಿ ಅನುಮತಿ ಪಡೆದು ಇತರೆ ಪುಸ್ತಕ ಉಪಯೋಗಿಸುತ್ತಿರುವ ಶಾಲೆಗಳ ಸಂಖ್ಯೆ | ಇತ್ತೀಚಿನ ಮಾನ್ಯತೆ ಪಡೆಯದ ಶಾಲೆಗಳು | ಒಟ್ಟು ಶಾಲೆಗಳ ಸಂಖ್ಯೆ |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ಬೆಂ.ಉತ್ತರ | 0 | 0 | 0 | 0 | 0 | 33 | 0 | 0 | 31 | 77 | 141 |
| 2 | ಬೆಂ.ದಕ್ಷಿಣ | 5 | 9 | 23 | 11 | 0 | 43 | 1 | 45 | 35 | 0 | 172 |
| 3 | ಬೆಂ.ಗ್ರಾಮಾಂತರ | 0 | 0 | 0 | 0 | 0 | 3 | 1 | 10 | 0 | 15 | 29 |
| 4 | ತುಮಕೂರು | 0 | 0 | 0 | 0 | 0 | 2 | 0 | 1 | 0 | 12 | 15 |
| 5 | ಮಧುಗಿರಿ | 0 | 0 | 0 | 0 | 0 | 8 | 0 | 3 | 0 | 5 | 16 |
| 6 | ಕೋಲಾರ | 2 | 0 | 0 | 0 | 0 | 10 | 0 | 0 | 0 | 10 | 22 |
| 7 | ಶಿವಮೊಗ್ಗ | 0 | 0 | 0 | 0 | 0 | 3 | 2 | 1 | 0 | 6 | 12 |
| 8 | ಚಿತ್ರದುರ್ಗ | 0 | 0 | 44 | 0 | 20 | 4 | 0 | 2 | 0 | 25 | 95 |
| 9 | ದಾವಣಗೆರೆ | 0 | 0 | 0 | 0 | 0 | 0 | 0 | 0 | 0 | 50 | 50 |
| 10 | ರಾಮನಗರ | 2 | 6 | 12 | 6 | 26 | 6 | 1 | 7 | 35 | 19 | 120 |
| 11 | ಚಿಕ್ಕಬಳ್ಳಾಪುರ | 0 | 0 | 5 | 0 | 0 | 4 | 0 | 0 | 0 | 13 | 22 |
| 12 | ಬೀದರ | 4 | 1 | 0 | 0 | 0 | 17 | 0 | 0 | 0 | | 22 |
| 13 | ಕಲಬುರಗಿ | 0 | 0 | 5 | 0 | 0 | 20 | 0 | 0 | 0 | 0 | 25 |
| 14 | ರಾಯಚೂರು | 0 | 0 | 0 | 0 | 0 | 9 | 0 | 0 | 0 | 92 | 101 |
| 15 | ಬಳ್ಳಾರಿ | 0 | 0 | 0 | 0 | 0 | 0 | 0 | 0 | 0 | 0 | 0 |
| 16 | ವಿಜಯನಗರ | 0 | 0 | 0 | 0 | 0 | 0 | 0 | 0 | 0 | 0 | 23 |
| 17 | ಯಾದಗಿರಿ | 0 | 0 | 0 | 0 | 0 | 0 | 0 | 0 | 0 | 0 | 0 |
| 18 | ಕೊಪ್ಪಳ | 0 | 0 | 0 | 0 | 0 | 0 | 0 | 0 | 0 | 0 | 0 |
| 19 | ಮೈಸೂರು | 2 | 1 | 0 | 0 | 0 | 3 | 0 | 0 | 0 | 0 | 6 |
| 20 | ಚಿಕ್ಕಮಗಳೂರು | 0 | 0 | 0 | 0 | 0 | 0 | 0 | 0 | 0 | 10 | 10 |
| 21 | ಹಾಸನ | 0 | 0 | 0 | 0 | 0 | 1 | 0 | 0 | 0 | 9 | 10 |
| 22 | ಉಡುಪಿ | 1 | 0 | 0 | 0 | 0 | 0 | 0 | 0 | 0 | 0 | 1 |
| 23 | ಕೊಡಗು | 0 | 2 | 0 | 0 | 0 | 0 | 0 | 0 | 0 | 6 | 8 |
| 24 | ಮಂಡ್ಯ | 2 | 0 | 0 | 0 | 0 | 10 | 2 | 9 | 0 | 0 | 23 |
| 25 | ದಕ್ಷಿಣ ಕನ್ನಡ | 1 | 0 | 0 | 0 | 0 | 0 | 0 | 0 | 0 | 0 | 1 |
| 26 | ಚಾಮರಾಜನಗರ | 0 | 0 | 0 | 0 | 0 | 0 | 0 | 0 | 0 | 2 | 2 |
| 27 | ಬೆಳಗಾವಿ | 4 | 1 | 0 | 0 | 0 | 4 | 0 | 0 | 0 | 0 | 9 |
| 28 | ಚಿಕ್ಕೋಡಿ | 0 | 0 | 0 | 0 | 0 | 3 | 0 | 0 | 0 | 0 | 3 |
| 29 | ಬಾಗಲಕೋಟೆ | 0 | 0 | 0 | 0 | 0 | 6 | 0 | 1 | 0 | 3 | 10 |
| 30 | ವಿಜಯಪುರ | 1 | 0 | 0 | 0 | 0 | 22 | 0 | 0 | 0 | 0 | 23 |
| 31 | ಶಿರಸಿ | 0 | 0 | 0 | 0 | 0 | 0 | 0 | 0 | 0 | 0 | 0 |
| 32 | ಉತ್ತರ ಕನ್ನಡ | 0 | 0 | 0 | 0 | 0 | 0 | 0 | 0 | 0 | 0 | 0 |
| 33 | ಧಾರವಾಡ | 3 | 0 | 0 | 2 | 0 | 5 | 0 | 0 | 0 | 2 | 12 |
| 34 | ಗದಗ | 0 | 1 | 0 | 0 | 0 | 1 | 0 | 0 | 0 | 8 | 10 |
| 35 | ಹಾವೇರಿ | 0 | 0 | 0 | 0 | 0 | 0 | 0 | 0 | 0 | 0 | 0 |
| | ಒಟ್ಟು | 27 | 21 | 89 | 19 | 46 | 217 | 7 | 79 | 101 | 364 | 993 |

DIRECTOR (Primary Educatio
O/o CPI, Bengaluru-01